Rotary
# JASMINE
ಜಾಸ್ಮಿನ್ | जास्मिन
UNITE FOR GOOD
WEEKLY BULLETIN OF ROTARY CLUB KUNDAPURA SOUTH

Charter No. 23496 | Zone 1, R. I. Dist. 3182 | Charter Date : 04-03-1986



40h year of Service and Fellowship



**Rtn. Francesco Arezzo**
RI President




**Rtn. Palaksha K.**
Dist. Governor



**Rtn. PHF. I. Narayana**
Asst. Governor



**Rtn. Koushik Yadiyal**
Zonal Lieutenant



**Rtn. Sachin Nackathaya**
President



**Rtn. Gerald Crasto**
Secretary



**Rtn. Ramananda Karanth**
Bulletin Editor

Volume 40 Issue - 6 14th August 2025

## CLUB ASSEMBLY

Time : 7.00 p.m.
Venue : Hotel Shivaprasad Grand, Kundapura

We meet every Thursday at 7-30 p.m.
at Sarojini Madhusoodhan D. Kushe Rotary South Hall, Kundapura

## ಸಂಪಾದಕೀಯ :



**‘ಮನಸಿನ ಪುಟಗಳ ನಡುವೆ ನೆನಪಿನ ನವಿಲುಗರಿ – ಕಾರ್ಮುಗಿಲ ಅಂಚಿನಲಿ ಭರವಸೆ ಹೊನ್ನ ಝರಿ’** ದಿ. ಹೆ.ಚ್ ಎಸ್. ವೆಂಕಟೇಶ್ ಮೂರ್ತಿ ಅವರ ಕವಿತೆ ತುಂಬಾ ನೆನಪಾಯಿತು. ನಮ್ಮ ರೋಟರಿ ಕ್ಲಬ್ಬಿನ ಇಲ್ಲಿಯವರೆಗಿನ ಸಭೆ ವಿವಿಧತೆಗಳಲ್ಲಿ ವೈವಿಧ್ಯತೆಯೊಂದಿಗೆ ಸರ್ವ ಸದಸ್ಯರನ್ನು ಕ್ಲಬ್ಬಿನ ಸಾಮಾನ್ಯ ಸಭೆಗೆ ಹಾಜರಾಗುವಂತೆ ಪ್ರೇರೇಪಿಸುತ್ತಿದೆ. ಅದರಲ್ಲೂ ಮೊನ್ನೆ ನಡೆದ ನಮ್ಮ ಸಭೆಯ ಮುಖ್ಯ ಅತಿಥಿಗಳ ಮಾತು, ಆಗಮಿಸಿದ ಸದಸ್ಯರ ಸಂಖ್ಯೆ ಕಾರ್ಯಕ್ರಮದಲ್ಲಿ ತಮ್ಮನ್ನು ತಾವು ತೊಡಗಿಸಿಕೊಳ್ಳುವಿಕೆ ಹೊಸ ಭರವಸೆಯನ್ನೇ ಚಿಗುರಿಸಿದೆ. ಅದರಲ್ಲೂ ನಮ್ಮ ಮುಖ್ಯ ಅತಿಥಿಗಳು ಡಾ। ರಂಜಿತ್ ಕುಮಾರ್ ಶೆಟ್ಟಿ ಅವರ ಮಾತು ರೋಚಕವಾಗಿ, ವಿನೋಧಭರಿತವಾಗಿ ಹಾಗೂ ಭಾವನಾತ್ಮಕವಾಗಿ ಮಾತನಾಡಿ ಸಭೆಯನ್ನು ಹೊಸ ವಿಚಾರಧಾರೆಯ ತೊರೆಯಲ್ಲಿ ತಮ್ಮ ವಾಗ್ಝರಿಯ ದೋಣಿಯಲ್ಲಿ ಕರೆದುಕಂಡು ಹೋಗಿದ್ದರು ಎಂದರೆ ಅತಿಶಯೋಕ್ತಿಯಲ್ಲ. “ಕುಂದಾಪುರದ ಹಿರಿಯ ವೈದ್ಯರೇ ತನಗೆ ವೈದ್ಯನಾಗಲು ಪ್ರೇರಣೆ” ಎಂದು ಆ ಎಲ್ಲಾ ವೈದ್ಯರುಗಳನ್ನು ಸ್ಮರಿಸಿ ನಮಗೊಂದು ಪರೋಕ್ಷ ಸಂದೇಶವನ್ನೂ ನೀಡಿದ್ದು ಪ್ರಾಯಷಃ ಹೆಚ್ಚಿನವರಿಗೆ ತಿಳಿದಿರಲಿಕ್ಕಿಲ್ಲ!. ಇಂದಿನ ನಮ್ಮ ರೋಟರಿ ಕುಂದಾಪುರ ದಕ್ಷಿಣದ ಯಶೋಗಾಥೆಯಲ್ಲಿ ಸಾಕಷ್ಟು ಹಿರಿಯ ಸದಸ್ಯರು ತಮ್ಮ ಬೆಲೆಕಟ್ಟಲಾಗದ ವೈಯಕ್ತಿಕ ಸಮಯಗಳ ತ್ಯಾಗ, ಧನ ಹಾಗೂ ಶ್ರಮದ ಕೊಡುಗೆ ಇದೆ. ಹಿಂದೆ ಹತ್ತು ವರುಷಗಳಿಂದ ನಾನು ಸಾಮಾನ್ಯ ಸದಸ್ಯನಾಗಿ ವರುಷದ ಎಲ್ಲಾ ಸಭೆಗಳಲ್ಲಿ ಹಾಜರಾಗುತ್ತಿದ್ದಾಗ ಯಾರು ಬರಲಿ ಬಾರದಿರಲಿ, ಸಭೆಯಲ್ಲಿ ರೋಚಕತೆ ಇರಲಿ ನೀರಸವಿರಲಿ ತಮ್ಮ ಕರ್ತವ್ಯವೆಂಬಂತೆ ಹಲವು ಹಿರಿಯ ಸದಸ್ಯರು ವಯಸ್ಸಿನ ಸಮಸ್ಯೆ ಇರಲಿ ದೇಹಾಲಸ್ಯವಿರಲಿ ನಮ್ಮ ಕ್ಲಬ್ ಸದಸ್ಯರಿಲ್ಲದೇ ಸಭೆಗಳು ನಿಲ್ಲಬಾರದು, ಕ್ಲಬ್ಬಿನ ಅಭಿವೃದ್ಧಿ ಕುಂಠಿತವಾಗಬಾರದೆಂದು ಅತ್ಯಂತ ಸಿನ್ಸಿಯರ್ ಆಗಿ ಹಾಜರಾಗುತ್ತಿದ್ದರು. ನಿಜವಾಗಲೂ ಅವರೆಲ್ಲರೂ ಇಂದಿನ ಹೊಸ ಪೀಳಿಗೆಯ ರೋಟರಿ ಸದಸ್ಯರಿಗೆ ಆದರ್ಶ ಪ್ರಾಯರೂ ಹಾಗೂ ಸದಾ ಸ್ಫೂರ್ತಿದಾಯಕರು. **“ತೋರುಬಾ ಮನ್ವಂತರವೇ ಕನಸಿನೂರ ದಾರಿ – ಸಾರುಬಾ ಶುಭ ಸಂದೇಶ ಕಾಲರಥವನೇರಿ”**

**– ರೊ. ರಮಾನಂದ ಕಾರಂತ್**

## ವಾರದ ಸಭೆಯ ವರದಿ




ತಾ/ 07/08/2025 ಗುರುವಾರ ನಮ್ಮ ಕ್ಲಬ್ಬಿಗೆ ಕುಂದಾಪುರದ ಪ್ರಸಿದ್ಧ ವೈದ್ಯರಾದ ಡಾ। ರಂಜಿತ್ ಕುಮಾರ್ ಶೆಟ್ಟಿ ಮುಖ್ಯ ಅತಿಥಿಗಳಾಗಿ ಆಗಮಿಸಿ “ನಾನು ಹೇಗೆ ಬರಹಗಾರನಾದೆ” ಎಂಬ ವಿಚಾರದಲ್ಲಿ ಮಾತನಾಡಿದರು. ತಾನು ಮೊದಲು ವೈದ್ಯನಾದೆ ಹಾಗಾಗಿ ಬರಹಗಾರನಾದೆ ಎಂದು ತನ್ನ ಮಾತನ್ನು ಪ್ರಾರಂಭಿಸುತ್ತಾ ವೈದ್ಯನಿಗೆ ಯಾವೆಲ್ಲಾ ಗುಣಗಳು ಇರಬೇಕು? ಯಾವ ರೀತಿ ಎದೆಗಾರಿಕೆ ಇರಬೇಕು? ಎಂಬ ಇತ್ಯಾದಿ ವಿಚಾರದಲ್ಲಿ ಮಾತನಾಡುತ್ತಾ ತನ್ನ ಬರಹಗಳಲ್ಲಿ ಹೆಚ್ಚಿನವು ತನ್ನ ವೃತ್ತಿ ಜೀವನದ ಅನುಭವಗಳನ್ನು ಸ್ವಲ್ಪ ಭಾವನೆ, ತಮಾಷೆ ಹಾಗೂ ಸಾಹಸವನ್ನು ಮಿಶ್ರ ಮಾಡಿ ಬರೆದೆ. ತನಗೆ ಬರೆಯಲು ಮೊದಲ ಪ್ರೇರಣೆಯೇ ರೋಟರಿ ಕ್ಲಬ್ ಕುಂದಾಪುರ ದಕ್ಷಿಣ ಹಾಗೂ ನಂತರದ ದಿನಗಳಲ್ಲಿ ಕುಂದಪ್ರಭ ವಾರ ಪತ್ರಿಕೆ ನೀಡಿದ ಸಹಕಾರವನ್ನು ಹೊಗಳಿದರು. ತಾವು ಬರೆದಂತ **ಜಯಂತಣ್ಣನಿಗಾಗಿ** ಕಾದಂಬರಿ ತನ್ನ ಜೀವನದಲ್ಲಿ ತಾನು ಕಂಡಂತ ಮಹಾನ್ ವೈದ್ಯರುಗಳ ಅತ್ಯುತ್ತಮ ಗುಣಗಳನ್ನು ಒಗ್ಗೂಡಿಸಿ ಉದ್ಭವವಾದ ವೈದ್ಯನೇ ಡಾ। ಜಯಂತ್ ಎಂದು ಅದರಲ್ಲೂ ತನಗೆ ನಿತ್ಯ ಪ್ರಾತಃಸ್ಮರಣೀಯರು “ಕುಂದಾಪುರದ ಹಿರಿಯ ವೈದ್ಯರೇ ತನಗೆ ವೈದ್ಯನಾಗಲು ಪ್ರೇರಣೆ” ಅದರಲ್ಲೂ ಹಳ್ಳಿಯಲ್ಲಿ ವೈದ್ಯ ಹೇಗಿರಬೇಕೆಂದು ತೋರಿಸಲು ತಮ್ಮ ತಂದೆಯವರಾದ ಕುಂದಾಪುರದ ಪ್ರಸಿದ್ಧ ವೈದ್ಯರಾದ ದಿ. ಡಾ। ಸೀತಾರಾಮ್ ಶೆಟ್ಟಿ ಅವರ ಕಾರ್ಯ ಚಟುವಟಿಕೆಗಳ ರೀತಿಯನ್ನು ವರ್ಣಿಸಿದರು.

ಆಗಮಿಸಿದ ಅತಿಥಿಗಳನ್ನು ಅಧ್ಯಕ್ಷ ರೊ. ಸಚಿನ್ ನಕ್ಕತ್ತಾಯ ಸ್ವಾಗತಿಸಿದರು. ರೊ. ಜೆರಾಲ್ಡ್ ಕ್ರಾಸ್ತಾ ವಾರದ ವರದಿ ವಾಚಿಸಿದರು. ರೊ. ಕೆ.ಕೆ. ಕಾಂಚನ್ ವಾರದ ಚಿಂತನೆ ಮಂಡಿಸಿದರು. ರೊ. ವಾಸುದೇವ ಕಾರಂತ್ ರೋಟರಿ ಮಾಹಿತಿ ತಿಳಿಸಿದರು. ರೊ. ರಮಾನಂದ ಕಾರಂತ್ ಮುಖ್ಯ ಅತಿಥಿಗಳ ಪರಿಚಯ ಮಾಡಿದರು. ರೊ. ಸತ್ಯನಾರಾಯಣ್ ಪುರಾಣಿಕ್ ಸಭೆಯ ಕೊನೆಯಲ್ಲಿ ಹಾಸ್ಯವನ್ನು ನಡೆಸಿಕೊಟ್ಟರು. ರೊ. ಶ್ರೀನಿವಾಸ್ ಶೇಟ್ ಅವರ ಪ್ರಾರ್ಥನೆಯೊಂದಿಗೆ ಪ್ರಾರಂಭವಾದ ಕಾರ್ಯಕ್ರಮ ರೊ. ಜಾನ್ಸನ್ ಆಲ್ಮೆಡಾ ಅವರ ಧನ್ಯವಾದದೊಂದಿಗೆ ಮುಕ್ತಾಯಗೊಂಡಿತು.



Welcoming Rtd. ADGP IPS Officer Dr. Bhaskar Rao with Indian Redcross Society on the occasion of founding stone for house for senior citizen a project of Indian Redcross society.




Donated a study chair to Manisha, an underprivileged child with speech and hearing impairments from Chitoor, Marnakatte.



Rtn.Ramesh Shetty Sir's birthday celebration

## Rotary Information

## Public Images of Rotary

Public Image is very important in Rotary because of the following reasons

1) To convey the message of Service to the mankind by Rotary
2) To convey the knowledge of the magnitude of funds utilised on various humanitarian projects across the Globe by the Rotary Foundation
3) To bring more members into the Rotary to strengthen the movement of Rotary
4) To raise the funds required for various humanitarian projects
5) To eliminate any misconception about Rotary in the minds of public

Let us unite to do good for the best public image in the years ahead.

## ಹೃದಯ ಲಬ್ ಡಬ್ ಎಂದರೆ ಮನಸ್ಸು ಮುಂದೇನು? ಮುಂದೇನು? ಎನ್ನುವುದು

ಸಂಸಾರ ಸಾಗರದಲ್ಲಿ ಹುಟ್ಟು, ಸಾವು ಮತ್ತು ರೋಗಗಳು ಅಸಂಖ್ಯಾತ ಭಯಾನಕ ಅಲೆಗಳ ರೂಪದಲ್ಲಿ ಇರುವವು. ನಾವು ಇಂತಹ ಸಾಗರವನ್ನು ದಾಟಬೇಕು. ಈ ಸಾಗರವನ್ನು ನಾವು ದಾಟಿದ ನಂತರವೇ ನಮಗೆ ಸಾರ್ಥಕತೆಯ ಭಾವ ಬರುತ್ತದೆ. ನಮ್ಮಲ್ಲಿ ಒಂದು ಕೋಟಿ ಧನರಾಶಿ ಇದ್ದು ನಾವು ಅಷ್ಟಕ್ಕೇ ಜೀವನ ಸಾರ್ಥಕವಾಯಿತೆಂದು ಕೊಂಡರೆ ಅದು ಮೂರ್ಖತನ. ನಮ್ಮ ಮನಸ್ಸು ವಿವಿಧ ವಸುಗಳ ಹಿಂದೆ ಬಿದ್ದಿರುತ್ತದೆ ಮತ್ತು ಸಮಸ್ಯೆಗಳು ಬೇರೆ ಬೇರೆ ರೀತಿಗೆಳಲ್ಲಿ ನಮ್ಮನ್ನು ಹಿಂಬಾಲಿಸುತ್ತವೆ. ನಾವು ಎರಡು ಪದವಿಗಳನ್ನು ಪಡೆದಾಕ್ಷಣ ಮನಸ್ಸು ಸುಮ್ಮನಿರುವುದಿಲ್ಲ. ಇನ್ನೂ ಉತ್ತಮವಾದುದು ಬೇಕೆಂದು ಕೇಳುತ್ತದೆ. ಎಲ್ಲಿಯವರೆಗೂ ನಮಗೆ ಆತ್ಮಸಾಕ್ಷಾತ್ಕಾರವಾಗುವುದಿಲ್ಲವೋ ಅಲ್ಲಿಯವರೆಗೂ ಸಾರ್ಥಕ್ಯ ನಮ್ಮಿಂದ ಜಾರಿ ಹೋಗುತ್ತಿರುತ್ತದೆ ಮತ್ತು ಯಾವಾಗಲೂ ಉನ್ನತವಾದದ್ದನ್ನು ಪಡೆಯಲು ನಮ್ಮ ಮನಸ್ಸು ನಮ್ಮನ್ನು ತಳ್ಳುತ್ತಿರುತ್ತದೆ. ಈ ಬಗೆಯ ಆಳವಾದ ಸಂಕಟಕರ ಸಂಗತಿಯನ್ನು ಶಂಕರರು ತಮ್ಮ "ಗುರುವಷ್ಟಕಂ" ಎಂಬ ಕೃತಿಯಲ್ಲಿ ಸುಂದರವಾಗಿ ವರ್ಣಿಸಿದ್ದಾರೆ. ಇದರ ಒಂದೊಂದು ಚರಣವೂ ತತಃ ಕಿಂ? ತತಃ ಕಿಂ? ಎಂಬ ಪ್ರೇರೇಪಿಸುವ ಪಲ್ಲವಿಯಲ್ಲಿ ಕೊನೆಗೊಳ್ಳುತ್ತದೆ. ಅಂದರೆ ನಾವು ಏನನ್ನಾದರೂ ಸಾಧಿಸಿದ್ದೇವೆ ಎಂದುಕೊಂಡ ತಕ್ಷಣ ನಮ್ಮ ಹೃದಯವು ಮುಂದೇನು? ಮುಂದೇನು? ಎಂದು ಪ್ರಶ್ನಿಸಿ ನಮ್ಮನ್ನು ಮತ್ತೊಂದು ಉತ್ತಮವಾದ ಸಾಧನೆ ಮಾಡಲು ಹುರಿದುಂಬಿಸುತ್ತದೆ. ಕೆಲ ಕಾಲ ನಾವು ಈ ಪ್ರಶ್ನೆಯನ್ನು ನಿಯಂತ್ರಿಸಬಹುದು, ಆದರೆ ಅದು ಮತ್ತೆ ಕಾಡಲು ಪ್ರಾರಂಭಿಸುತ್ತದೆ. ನಮಗೆ ಆತ್ಮಸಾಕ್ಷಾತ್ಕಾರವಾದಗಲೇ ನಮಗೆ ಸಾರ್ಥಕ್ಯ ಸಿಕ್ಕಿ ಈ ಪ್ರಶ್ನೆಗೆ ಉತ್ತರವೂ ಸಿಗುತ್ತದೆ. ಬುದ್ಧನಿಗೆ ಸತ್ಯದರ್ಶನವಾಗಿ ಧ್ಯಾನದಿಂದ ಹೊರಬಂದು ಆಡಿದ ಮೊದಲ ಮಾತುಗಳು ಹೀಗಿವೆ, "ನಾನು ಸಾರ್ಥಕ್ಯವನ್ನು ಪಡೆದೆ. ನಾನು ಸಾಧಿಸಬೇಕೆಂದು ಕೊಂಡಿದ್ದನ್ನು ಸಾಧಿಸಿದೆ. ಅಮೃತತ್ವದ ಬಾಗಿಲು ತೆರೆಯಿತು". ಹೀಗೆ ನಾವು ಬ್ರಹ್ಮದಲ್ಲಿ ಸ್ಥಾಪಿತವಾದರೆ ಮಾತ್ರ ಜೀವನವನ್ನು ಸಾರ್ಥಕ ಪಡಿಸಿಕೊಂಡಂತೆ.

–ಸ್ವಾಮಿ ರಂಗನಾಥಾನಂದ



Rtn. Dr. S. N. Padiyar 1985-86 & 1986-87 | Rtn. B. Arun Kumar Shetty 1987-88 | Rtn. Dr. H. Rammohan 1988-89 | Rtn. K. Shridhar Kamath 1989-90 | Rtn. Dr. Anand Nayak 1990-91 | Rtn. B. Ramachandra Prabhu 1991-92 | Rtn. G. Santhosh Kumar Shetty 1992-93 | Rtn. Dr. H. A. Vishweshwar 1993-94 | Rtn. Dr. H. R. Hebbar 1994-95



Rtn. K. T. Surendranath
1995-96



Rtn. B. C. Somayaji
1997-98



Rtn. S. Subraya Halambi
1999-2000



Rtn. K. Seetharama Nackathaya
2001-02



Rtn. Dr. Umesh Puthran
2003-04



Rtn. A. Shantharam Pai
2005-06

## ವಿವಾಹ ವಾರ್ಷಿಕೋತ್ಸವದ ಶುಭಾಶಯಗಳು



ತಾ.10-08-2025ನೇ ಆದಿತ್ಯವಾರದಂದು ತಮ್ಮ ವಿವಾಹ ವಾರ್ಷಿಕೋತ್ಸವವನ್ನು ಆಚರಿಸಿದ ರೊ. ರಮಾನಂದ ಕಾರಂತ ಮತ್ತು ಆ್ಯನ್ ಗಾಯತ್ರಿ ಇವರಿಗೆ ಎಲ್ಲಾ ಸದಸ್ಯರ ಪರವಾಗಿ ಶುಭಾಶಯಗಳು.
ಮೊ. : 99864 73841



ತಾ. 15-08-2024ನೇ ಶುಕ್ರವಾರದಂದು ತಮ್ಮ ವಿವಾಹ ವಾರ್ಷಿಕೋತ್ಸವವನ್ನು ಆಚರಿಸಲಿರುವ ರೊ. ರಾಮಪ್ರಸಾದ್ ಶೇಟ್ ಮತ್ತು ಆ್ಯನ್ ರಶ್ಮಿ ಶೇಟ್ ಇವರಿಗೆ ಕ್ಲಬ್ಬಿನ ಪರವಾಗಿ ಶುಭಾಶಯಗಳು.
ಮೊ. : 9845085699



ತಾ. 21-08-2024ನೇ ಗುರುವಾರದಂದು ತಮ್ಮ ವಿವಾಹ ವಾರ್ಷಿಕೋತ್ಸವವನ್ನು ಆಚರಿಸಲಿರುವ ರೊ. ಎನ್. ಶಾಂತಾರಾಮ ನಾಯಕ್ ಮತ್ತು ಆ್ಯನ್ ರೇಖಾ ನಾಯಕ್ ಇವರಿಗೆ ಕ್ಲಬ್ಬಿನ ಪರವಾಗಿ ಶುಭಾಶಯಗಳು.
ಮೊ. : 9448887977

"Do what you can to show you care about other people, and you will make our world a better place."
– **Rosalyn Carter**

## ಹುಟ್ಟುಹಬ್ಬದ ಶುಭಾಶಯಗಳು



ರೊ. ಎಸ್. ಜಯಕರ ಶೆಟ್ಟಿ
ದಿನಾಂಕ : ಆಗಸ್ಟ್ 20
ಮೊಬೈಲ್ : 9448488232

## THE ROTARY 4-WAY TEST

1. Is it the truth?
2. Is it fair to all concerned?
3. Will it build goodwill and better friendships?
4. Will it be beneficial to all concerned?

*This Bulletin is sponsored by :*
**Rtn. Aouzaline Rebello**
**Mob. : 9980192203**

For Private Circulation only

Email id – rotaryclub.kundapurasouth@gmail.com



Rtn. S. Sadananda Chatra
1996-97



Rtn. K. Suresh Kamath
1998-99



Rtn. S. Vijaya Shetty
2000-01



Rtn. U. S. Shenoy
2002-03



Rtn. Dr. B. V. Udupa
2004-05



Rtn. K. Shantharam Prabhu
2006-07



Rtn. T. Raghavendra Hatwar 2007-08 | Rtn. K. Shankar 2008-09 | Rtn. S. Jayakar Shetty 2009-10 | Rtn. K. K. Kanchan 2010-11 | Rtn. Abhinandan A. Shetty 2011-12 | Rtn. Vivian Crasto 2012-13 | Rtn. G. Shreedhar Shetty 2013-14 | Rtn. K. P. Bhat 2014-15 | Rtn. P. Vasudeva Karanth 2015-16



Rtn. Aouzline F. Rebello 2016-17 | Rtn. J. Srinath Rao 2017-18 | Rtn. Johnson D' Almeida 2018-19 | Rtn.Devaraj 2019-20 | Rtn. Dr. Uttam Kumar Shetty 2020-21 | Rtn.Mahendr Shetty 2021-22 | Rtn.Sathyanarayana Puranik 2022-23 | Rtn.Suresh Mallya 2023-24 | Rtn. Judith Mendonca 2024-25